**ದಿಃ27.10.2018 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ವಾದಿ ಪರ ವಕೀಲರಿಂದಃ**

ಓ.ಎಸ್.ನಂ.131/1990 ಈ ದಾವೆಯ ಅಸಲರ್ಜಿಯ ನೋಟರೈಸ್ಡ ನಕಲನ್ನು ಹಾಜರು ಪಡಿಸಿದ್ದು ಅದನ್ನು ನಿಪಿ-33 ಎಂದು, ಅದರಲ್ಲಿರುವ ವಾದಿಯರಾದ ನಾಗುಸಾ ಮತ್ತು ಶ್ರೀಮತಿ ಸುಶೀಲಾ ನನ್ನ ಹೆಂಡತಿಯ ತಂದೆ-ತಾಯಿ. ಸದರಿ ದಾವೆಯಲ್ಲಿ ದಿಃ08.04.1992 ರಂದು ಆದಂತಹ ತೀರ್ಪಿನ ನೋಟರೈಸ್ಡ ನಕಲನ್ನು ನಿಪಿ-34 ಎಂದು, ಅಮಲ ಜಾರಿ ಪ್ರಕರಣ 470/2007 ನ್ನು ಪ್ರಧಾನ ಹಿರಿಯ ಶ್ರೇಣಿ ನ್ಯಾಯಾಲಯದಲ್ಲಿ ದಾಖಲಿಸಿದ್ದು ಆ ಅರ್ಜಿಯ ಮತ್ತು ಪ್ರಮಾಣ ಪತ್ರದ ನೋಟರೈಸ್ಡ ನಕಲನ್ನು ನಿಪಿ-35 ಎಂದು, ರಿಜಿಸ್ಟ್ರಾರ್ ಕೋ-ಆಪರೇಟಿವ್ ಸೋಸೈಟಿ ಇವರು ದಿಃ03.02.2007 ರಂದು ಹೊರಡಿಸಿದ ಐ ತೀರ್ಪಿನ ನೋಟರೈಸ್ಡ ನಕಲನ್ನು ನಿಪಿ-36 ಎಂದು, ಕೆ ಎ ಟಿ ಬೆಂಗಳೂರಿನಲ್ಲಿ ಸಲ್ಲಿಸಿದ ಮೇಲ್ಮನವಿಯಲ್ಲಿ ದಿಃ26-03-2013 ರಂದು ಆದ ತೀರ್ಪಿನ ನೋಟರೈಸ್ಡ ನಕಲನ್ನು ನಿಪಿ-37 ಎಂದು, ವಾದಿಗೆ ಸಂಬಂಧಪಟ್ಟಂತಹ 2013-14 ನೇ ಸಾಲಿನ ಆದಾಯ ತೆರಿಗೆ ಸಂಪೂರ್ಣ ಮಾಹಿತಿವುಳ್ಳ ನೋಟರೈಸ್ಡ ದಾಖಲೆಯನ್ನು ನಿಪಿ-38 ಎಂದು, ಬ್ಯಾಲೆನ್ಸ ಶೀಟನ್ನು ನಿಪಿ-39 ಎಂದು, ಸಂಬಂಧಪಟ್ಟ ಎಂಟ್ರಿಯನ್ನು ನಿಪಿ-39(ಎ) ಎಂದು ಗುರುತಿಸಲಾಯಿತು.

**(ಪ್ರತಿವಾದಿ ಮತ್ತು ಅವರ ಪರ ವಕೀಲರು ಗೈರುಹಾಜರು ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು)**

**ಮರುವಿಚಾರಣೆ ಇಲ್ಲ.**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

2 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.